ಧಾರವಾಡದಲ್ಲಿ ಕೇಂದ್ರ ಪ್ರವಾಸೋದ್ಯಮ ಯಾತ್ರಿ ನಿವಾಸ ಸ್ಥಾಪಿಸುವುದು

4939 - ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) : ಮಾನ್ಯ ಪ್ರವಾಸೋದ್ಯಮ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಧಾರವಾಡದಲ್ಲಿ ಕೇಂದ್ರ ಪ್ರವಾಸೋದ್ಯಮ ಇಲಾಖೆ ಯಾವ ವರ್ಷದಿಂದ ಯಾತ್ರಿ ನಿವಾಸ ಕಟ್ಟಡದ ಕೆಲಸವನ್ನು ಪ್ರಾರಂಭಿಸಿರುತ್ತದೆ? ಈ ಕೆಲಸವನ್ನು ಪೂರ್ಣ ಮಾಡಲು ನಿಗಧಿತ ಅವಧಿ ಎಷ್ಟು?*

ಆ) *ಈ ಕಟ್ಟಡಕ್ಕೆ ಖರ್ಚು ಮಾಡಿದ ವೆಚ್ಚವೆಷ್ಟು? ವಿವರ ನೀಡುವುದು.*

ಶ್ರೀ ಆರ್. ರೋಷನ್ ಬೇಗ್ (ಪ್ರವಾಸೋದ್ಯಮ ಮತ್ತು ಹಜ್ ಸಚಿವರು) :

ಅ) ಧಾರವಾಡದಲ್ಲಿ ಕೇಂದ್ರ ಸರ್ಕಾರದ ಧನ ಸಹಾಯದಿಂದ ಯಾತ್ರಿ ನಿವಾಸದ ನಿರ್ಮಾಣ 1997ರಲ್ಲಿ ಪ್ರಾರಂಭಿಸಿ ಜೂನ್ 2000ರಲ್ಲಿ ಪೂರ್ಣಗೊಳಿಸಿದೆ.

ಆ) ರೂ. 89.22 ಲಕ್ಷ
ರೂ. 50.20 ಲಕ್ಷ ಕೇಂದ್ರದ ಪಾಲು
ರೂ. 39.02 ಲಕ್ಷ ರಾಜ್ಯದ ಪಾಲು

ಧಾರವಾಡ ನಗರದಲ್ಲಿ ಬೃಹತ್ ಕ್ರೀಡಾಂಗಣದ ನಿರ್ಮಾಣ

4940 - ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) : ಮಾನ್ಯ ಯುವಜನ ಸೇವೆಗಳು ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಉತ್ತರ ಕರ್ನಾಟಕದ ಯುವಕರ ಸಂಪನ್ಮೂಲ ಇರುವ ಶೈಕ್ಷಣಿಕ ಕೇಂದ್ರವಾದ ಧಾರವಾಡ ನಗರದಲ್ಲಿ ಎರಡು ಪ್ರತಿಷ್ಠಿತ ವಿಶ್ವವಿದ್ಯಾನಿಲಯಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ ಬೆಂಗಳೂರು, ಮೈಸೂರು ಮಹಾನಗರದಲ್ಲಿರುವ ಮಾದರಿಯಂತೆ ಧಾರವಾಡ ನಗರದಲ್ಲಿ ಬೃಹತ್ ಕ್ರೀಡಾಂಗಣದ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಇ) *ಸದ್ಯ ಇರುವ ಆರ್.ಎನ್. ಶೆಟ್ಟಿ ಕ್ರೀಡಾಂಗಣದಲ್ಲಿ ಅಗತ್ಯವಿರುವ ಮೂಲಭೂತ ಸೌಕರ್ಯ ಇಲ್ಲದ ಕಾರಣ ಏಶಿಯಡ್ ಕ್ರೀಡೆಗಳು ನಡೆಯದಿದ್ದುದು, ಸರ್ಕಾರದ ಗಮನಕ್ಕೆ ಬಂದಿದೆಯೇ?*

ಈ) *ಹಾಗಿದ್ದಲ್ಲಿ ಸುಸಜ್ಜಿತ ಕ್ರೀಡಾಂಗಣವನ್ನು ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?*

ಉ) *ಮಹಾನಗರದಲ್ಲಿ ರಾಷ್ಟ್ರ ಮಟ್ಟದ ಈಜು ಸ್ಪರ್ಧೆಗಳನ್ನು ನಡೆಸಲು ನೀರಿನ ಸೌಲಭ್ಯವಿರುವ ಕೇರಿಯ ದಂಡೆಯಲ್ಲಿ ನಿರ್ಮಿಸಲು ಸರ್ಕಾರ ಕ್ರಮ ಕೈಗೊಳ್ಳುವುದೆ?*

ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್ (ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು) :

ಅ) ಹೌದು.

ಆ) ಹೌದು.

ಇ) ಹೌದು.

ಈ) ಯಾವುದೇ ಪ್ರಸ್ತಾವನೆಯು ಸರ್ಕಾರದ ಮುಂದಿಲ್ಲ.

ಉ) ಯಾವುದೇ ಪ್ರಸ್ತಾವನೆಯು ಸದ್ಯಕ್ಕೆ ಸರ್ಕಾರದ ಮುಂದಿರುವುದಿಲ್ಲ.

ರಾಜ್ಯ ಪ್ರಶಸ್ತಿಯ ವಿತರಣೆ

4943 - ಶ್ರೀ ಹೆಚ್.ಎಂ. ಚಂದ್ರಶೇಖರಪ್ಪ (ಶಿವಮೊಗ್ಗ) : ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖಾ ಸಚಿವೆಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1998-99 ಮತ್ತು 1999-2000ನೇ ಸಾಲಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖಾ ವತಿಯಿಂದ ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಸಂಗೀತ, ಸಾಹಿತ್ಯ, ಕಲೆ, ನೃತ್ಯ, ಜಾನಪದ ಕ್ಷೇತ್ರದಲ್ಲಿ ಕನಿಷ್ಟ ಪಕ್ಷ 5 ಜನರಿಗೆ ರಾಜ್ಯ ಪ್ರಶಸ್ತಿ ನೀಡಲಾಗಿದೆಯೇ?

ಆ) ಪೂರ್ಣ ವಿವರಗಳನ್ನು ನೀಡುವುದು?

ಶ್ರೀಮತಿ ರಾಣಿ ಸತೀಶ್ (ಕನ್ನಡ ಮತ್ತು ಸಂಸ್ಕೃತಿ ಇಲಾಖಾ ರಾಜ್ಯ ಸಚಿವೆಯವರು) :

ಅ) ವಿಧಾನಸಭಾ ಕ್ಷೇತ್ರವಾರು ರಾಜ್ಯ ಪ್ರಶಸ್ತಿ ನೀಡುವ ಕ್ರಮ ಅನುಸರಿಸುತ್ತಿಲ್ಲ. ಆದರೆ ವಿವಿಧ ಪ್ರಕಾರಗಳ ಕಲಾವಿದರನ್ನು ರಾಜ್ಯ ಪ್ರಶಸ್ತಿಗೆ ಪರಿಗಣಿಸಲಾಗುತ್ತಿದೆ. ಆದರೆ ಈ ಪ್ರಶಸ್ತಿಗಾಗಿ ಪ್ರತಿ ಕ್ಷೇತ್ರಕ್ಕೆ ಸಂಖ್ಯೆಯನ್ನು ಗೊತ್ತುಪಡಿಸಿರುವುದಿಲ್ಲ.

ಆ) ಪಟ್ಟಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ಕರ್ನಾಟಕ ವಿಧಾನ ಸಭಾ ಸದಸ್ಯರಾದ ಶ್ರೀ ಹೆಚ್.ಎಂ. ಚಂದ್ರಶೇಖರಪ್ಪ (ಶಿವಮೊಗ್ಗ) ಇವರ ಪ್ರಶ್ನೆ ಸಂಖ್ಯೆ 5637ಕ್ಕೆ ಅನುಬಂಧ

1998-99ನೇ ಸಾಲಿನಲ್ಲಿ ನೀಡಲಾದ ರಾಜ್ಯ ಪ್ರಶಸ್ತಿ ವಿಜೇತರ ಪಟ್ಟಿ

1.	ಶ್ರೀ ಹೆಚ್.ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್	ಸಾಹಿತ್ಯ
2.	ಶ್ರೀಮತಿ ಗೀತಾ ನಾಗಭೂಷಣ	ಸಾಹಿತ್ಯ
3.	ಶ್ರೀ ವಿ. ಚಿಕ್ಕವೀರಯ್ಯ	ಸಾಹಿತ್ಯ
4.	ಶ್ರೀ ದು.ಸಿಂ. ಬೆಳಗಲಿ	ಸಾಹಿತ್ಯ
5.	ಶ್ರೀ ಬೊಮ್ಮರಸೇ ಗೌಡ ಬಿ.	ಸಾಹಿತ್ಯ